# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ಡಿ.ಪಿ.ಆರ್. ಪ್ರಸ್ತಾವನೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

** ** **

*ಓದಲಾಗಿದೆ :-*

ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು, ಇವರ ಪತ್ರ ಸಂಖ್ಯೆ:ಕಾನೀನಿ/ತಾಂತ್ರಿಕ-5/ತುರುವೇಕೆರೆ ವಿಭಾಗ/03/2018-19/3491, ದಿನಾಂಕ:16-01-2019.

*ಪ್ರಸ್ತಾವನೆ :-*

ಮೇಲೆ ಓದಲಾದ ಪತ್ರದಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ ನಿಯಮಿತ, ಬೆಂಗಳೂರು, ಇವರು ಹೇಮಾವತಿ ನದಿಯು ಕಾವೇರಿ ನದಿಯ ಒಂದು ಉಪ ನದಿಯಾಗಿದ್ದು, ಈ ನದಿಗೆ ಅಡ್ಡಲಾಗಿ ಹಾಸನ ಜಿಲ್ಲೆಯ ಗೊರೂರು ಗ್ರಾಮದ ಹತ್ತಿರ ಅಣೆಕಟ್ಟನ್ನು ನಿರ್ಮಿಸಲಾಗಿರುತ್ತದೆ ಹಾಗೂ ಹೇಮಾವತಿ ಜಲಾಶಯವನ್ನು 1967-68 ರಲ್ಲಿ ಪ್ರಾರಂಭಿಸಿ 1978 ರಲ್ಲಿ ಪೂರ್ಣಗೊಳಿಸಲಾಗಿರುತ್ತದೆ ಎಂದು ವರದಿ ಮಾಡಿರುತ್ತಾರೆ.

2. ಹೇಮಾವತಿ ಜಲಾಶಯವು ಹೇಮಾವತಿ ಎಡದಂಡೆ ನಾಲೆ, ಹೇಮಾವತಿ ಬಲದಂಡೆ ನಾಲೆ ಹಾಗೂ ಹೇಮಾವತಿ ಬಲ ಮೇಲ್ದಂಡೆ ನಾಲೆ ಒಟ್ಟು 03 ಮುಖ್ಯ ನಾಲೆಗಳನ್ನು ಹೊಂದಿದ್ದು ಮತ್ತು ಹೇಮಾವತಿ ಎಡದಂಡೆ ನಾಲೆಯ ಸರಪಳಿ 72.26 ಕಿ.ಮೀ. ನಲ್ಲಿ 02 ಶಾಖೆಗಳಾಗಿ ಹೇಮಾವತಿ ಎಡದಂಡೆ ನಾಲೆ ಮತ್ತು ಬಾಗೂರು ಸುರಂಗದ ಆಗಮನ ನಾಲೆಯೆಂದು ವಿಭಾಗವಾಗಿರುತ್ತದೆ.

3. ಬಾಗೂರು ನವಿಲೆ ಸುರಂಗ ನಿರ್ಗಮನದಿಂದ ಬರುವ ವೈ-ನಾಲೆಯು 5.50 ಕಿ.ಮೀ. ಇದ್ದು, ನಂತರ ತುಮಕೂರು ಶಾಖಾ ನಾಲೆ ಮತ್ತು ನಾಗಮಂಗಲ ಶಾಖಾ ನಾಲೆಗಳು ಇಬ್ಭಾಗವಾಗುತ್ತವೆ.

4. ಹೇಮಾವತಿ ನಾಲಾ ವಲಯ, ತುಮಕೂರು ವ್ಯಾಪ್ತಿಯಲ್ಲಿ ತುಮಕೂರು ಶಾಖಾ ನಾಲೆ, ನಾಗಮಂಗಲ ಶಾಖಾ ನಾಲೆ ಮತ್ತು ಬಾಗೂರು ನವಿಲೆ ಸುರಂಗ ನಿರ್ಗಮನ ಏತ ನೀರಾವರಿ ಯೋಜನೆಗಳ ಕಾರ್ಯವ್ಯಾಪ್ತಿಯನ್ನು ಒಳಗೊಂಡಿದ್ದು, ಒಟ್ಟಾರೆ 1,19,408 ಹೆಕ್ಟೇರ್ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲಾಗುವುದಾಗಿದೆ. ಇದರಡಿ ಕುಡಿಯುವ ನೀರಿನ ಬೇಡಿಕೆಗಳನ್ನು ಪೂರೈಕೆ ಒಳಗೊಂಡಂತೆ 25.31 ಟಿ.ಎಂ.ಸಿ. ನೀರಿನ ಹಂಚಿಕೆ ಮಾಡಲಾಗಿದೆ.

5. ತುಮಕೂರು ಶಾಖಾ ನಾಲೆಯು ಮೂಲ ಯೋಜನೆಯಂತೆ ಒಟ್ಟು 240 ಕಿ.ಮೀ. ಉದ್ದವಿದ್ದು, 1445 ಕ್ಯೂಸೆಕ್ಸ್ ನೀರನ್ನು ಹರಿಸಲು ವಿನ್ಯಾಸಿಸಲಾಗಿರುತ್ತದೆ. ಮುಖ್ಯ ನಾಲೆ 228 ಕಿ.ಮೀ. ಮತ್ತು ಕೊನೆಯಲ್ಲಿ ಬರುವ ವಿತರಣಾ ನಾಲೆ 31ರ ನಾಲೆಯು ಸೇರಿದಂತೆ ಒಟ್ಟು 240 ಕಿ.ಮೀ. ಕೊನೆಗೊಳ್ಳುತ್ತದೆ. ತುಮಕೂರು ಶಾಖಾ ನಾಲೆ 228 ಕಿ.ಮೀ. ವರೆಗೆ ನಾಲಾ ಅಗೆತ, ಏರಿ ನಿರ್ಮಾಣ, ಅಡ್ಡಮೋರಿ ಕಾಮಗಾರಿಗಳು ಪೂರ್ಣಗೊಂಡಿದ್ದು, ವಿತರಣಾ ನಾಲೆ 31 ರ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ತುಮಕೂರು ಶಾಖಾ ನಾಲೆಯಲ್ಲಿ 1996 ರಿಂದಲೂ ಸಹ ನೀರನ್ನು ಹರಿಸಲಾಗುತ್ತಿದೆ.

6. ಮೂಲ ಅಂದಾಜಿನ ರೀತ್ಯಾ ತುಮಕೂರು ಶಾಖಾ ನಾಲೆಯಿಂದ 2,37,000 ಎಕರೆ ಪ್ರದೇಶಕ್ಕೆ ನೀರಾವರಿ ಸೌಲಭ್ಯ ಕಲ್ಪಿಸಲು ಯೋಜಿಸಲಾಗಿದ್ದು, ನೀರಾವರಿ ಸಾಮರ್ಥ್ಯ ಕಲ್ಪಿಸಿರುವುದು 1,68,000 ಎಕರೆ ಮತ್ತು ಕಾವೇರಿ ನ್ಯಾಯಾಧೀಕರಣದ ಅಂತಿಮ ತೀರ್ಪಿನಲ್ಲಿ ಅಚ್ಚುಕಟ್ಟಿಗಾಗಿ 10.936 ಟಿ.ಎಂ.ಸಿ. ನೀರು ಹಂಚಿಕೆಯಾಗಿರುತ್ತದೆ.

7. ತುಮಕೂರು ಶಾಖಾ ನಾಲೆಯಡಿ ಬರುವ ಅಚ್ಚುಕಟ್ಟಿಗೆ ನೀರೊದಗಿಸುವುದರ ಜೊತೆಗೆ ಕುಡಿಯುವ ನೀರಿನ ಬೇಡಿಕೆಗಾಗಿ 6.617 ಟಿ.ಎಂ.ಸಿ ಸಹ ಪೂರೈಸಬೇಕಾಗಿರುತ್ತದೆ. ಸದರಿ ನಾಲೆಯನ್ನು ಸುಮಾರು 25 ವರ್ಷಗಳ ಹಿಂದೆ ನಿರ್ಮಿಸಲಾಗಿದ್ದು, ಪ್ರಸ್ತುತ ನಾಲೆಯಲ್ಲಿ ನಿಗದಿತ ವಿನ್ಯಾಸದ ಪ್ರಮಾಣದ ನೀರನ್ನು

ಪರಿಸಲು ಸಾಧ್ಯವಾಗುತ್ತಿಲ್ಲ ಹಾಗೂ ಕುಡಿಯುವ ನೀರಿನ ಬೇಡಿಕೆಯನ್ನು ಸಹ ಪೂರೈಸುವುದು ಕಷ್ಟ ಸಾಧ್ಯವಾಗಿರುತ್ತದೆ. ಆದುದರಿಂದ, ಸದರಿ ನಾಲೆಯನ್ನು ನೀರಾವರಿಗೆ ಮತ್ತು ಕುಡಿಯುವ ನೀರಿನ ಬೇಡಿಕೆಗೆ ಅನುಗುಣವಾಗಿ 1600 ಕ್ಯೂಸೆಕ್ಸ್‌ಗೆ ಮರು ವಿನ್ಯಾಸಗೊಳಿಸಲು ಹಾಗೂ ನಾಲೆಯನ್ನು ರೀ-ಮಾಡಲಿಂಗ್ ಮಾಡುವ ಬಗ್ಗೆ ನೀರಾವರಿ ಸಲಹಾ ಸಮಿತಿ ಸಭೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ.

8. ಪ್ರಸ್ತುತ ಮೊದಲನೇ ಹಂತದಲ್ಲಿ ವೈ-ನಾಲೆ 5.50 ಕಿ.ಮೀ. ಮತ್ತು ತುಮಕೂರು ಶಾಖಾ ನಾಲೆ 0 ರಿಂದ 70 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡಲು ಪ್ರಸ್ತಾಪಿಸಿದ್ದು, ತುಮಕೂರು ಶಾಖಾ ನಾಲೆ 0 ರಿಂದ 70 ಕಿ.ಮೀ. ವರೆಗೆ ಸುಮಾರು 26 ಕಿ.ಮೀ. ಉದ್ದದ ಆಳ ಕಾಲುವೆ ಮತ್ತು ಸುಮಾರು 8 ರಿಂದ 10 ಕಿ.ಮೀ. ನಾಲಾ ಏರಿ ನಿರ್ಮಾಣದಲ್ಲಿ ಹಾದುಹೋಗಿದ್ದು, ಸುಮಾರು 20 ವರ್ಷಗಳಿಂದಲೂ ಸತತವಾಗಿ ನೀರು ಹರಿಸಲಾಗಿರುತ್ತದೆ. ನಾಲಾ ಏರಿಯು ಕೆರೆಯ ಅಂಗಳದಲ್ಲಿ ಹಾದುಹೋಗಿರುವ ಭಾಗದಲ್ಲಿ ಹೆಚ್ಚಿನ ಪ್ರಮಾಣದ Seepage ಇದ್ದು ನಾಲಾ ಏರಿಯನ್ನು ಭದ್ರಪಡಿಸುವುದು ಅವಶ್ಯಕವಾಗಿರುತ್ತದೆ. ಆಳ ಕಾಲುವೆಯಲ್ಲಿ ಅತಿ ಹೆಚ್ಚು ಸೀಪೇಜ್ ಇರುವ ಭಾಗದಲ್ಲಿ ರಿಟೈನಿಂಗ್ ಗೋಡೆಯನ್ನು ನಿರ್ಮಿಸಬೇಕಾಗುತ್ತದೆ. ನಾಲೆಯನ್ನು ಮರು ವಿನ್ಯಾಸಗೊಳಿಸಬೇಕಾಗಿರುವುದರಿಂದ ಕೆಲವು ಅಡ್ಡಮೋರಿ ಕಾಮಗಾರಿಗಳನ್ನು ಮರು ನಿರ್ಮಿಸುವುದು ಅವಶ್ಯಕವಾಗಿರುತ್ತದೆ. ಸದರಿ ಪ್ರಸ್ತಾವನೆಗೆ ದಿನಾಂಕ:10-01-2019 ರಂದು ನಡೆದ ಕಾವೇರಿ ನೀರಾವರಿ ನಿಗಮದ 66ನೇ ಮಂಡಳಿಯ ಸಭೆಯಲ್ಲಿ ಅನುಮೋದನೆಯಾಗಿರುತ್ತದೆ.

9. ಈ ಹಿನ್ನೆಲೆಯಲ್ಲಿ, ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

10. ಮಾನ್ಯ ಮುಖ್ಯಮಂತ್ರಿಗಳು ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.250.00 ಕೋಟಿ ಮತ್ತು ಎರಡನೇ ಹಂತ ರೂ.225.00 ಕೋಟಿ, ಒಟ್ಟಾರೆ ರೂ.475.00 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಹಾಗೂ ಮೊದಲನೇ ಹಂತಕ್ಕೆ ಮಾತ್ರ ಈಗ ಟೆಂಡರ್ ಕರೆಯಲು ಅನುಮೋದಿಸಿರುತ್ತಾರೆ.

11. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ : ಜಸಂಇ 4 ಎನ್‌ಹೆಚ್‌ಪಿ 2019, ಬೆಂಗಳೂರು, ದಿನಾಂಕ : 01-07-2019

ಹೇಮಾವತಿ ಯೋಜನೆಯ ತುಮಕೂರು ಶಾಖಾ ನಾಲೆಯ ಸರಪಳಿ:0.00 ಕಿ.ಮೀ. ರಿಂದ 70.00 ಕಿ.ಮೀ. ವರೆಗೆ ಹಾಗೂ ವೈ-ನಾಲೆಯ ಸರಪಳಿ: 15.727 ಕಿ.ಮೀ. ನಿಂದ 21.175 ಕಿ.ಮೀ. ವರೆಗೆ ರೀ-ಮಾಡಲಿಂಗ್ ಮಾಡುವ ರೂ.475.00 ಕೋಟಿ (ರೂಪಾಯಿ ನಾಲ್ಕು ನೂರಾ ಎಪ್ಪತ್ತೈದು ಕೋಟಿಗಳು ಮಾತ್ರ) ಗಳ ಮೊತ್ತದ ವಿವರವಾದ ಯೋಜನಾ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

2. ಪ್ರಸ್ತಾಪಿತ ಯೋಜನೆಯನ್ನು ಎರಡು ಹಂತಗಳಲ್ಲಿ, ಅಂದರೆ ಮೊದಲನೇ ಹಂತ ರೂ.250.00 ಕೋಟಿ ಮತ್ತು ಎರಡನೇ ಹಂತ ರೂ.225.00 ಕೋಟಿ, ಒಟ್ಟಾರೆ ರೂ.475.00 ಕೋಟಿ ಮೊತ್ತದಲ್ಲಿ ಕೈಗೊಳ್ಳತಕ್ಕದ್ದು ಹಾಗೂ 2019-20ನೇ ಸಾಲಿನಲ್ಲಿ ಮೊದಲನೇ ಹಂತಕ್ಕೆ ಮಾತ್ರ ಟೆಂಡರ್ ಕರೆಯಲು ಅನುಮೋದಿಸಿದೆ.

3. ಈ ಆದೇಶವು ಕರ್ನಾಟಕ ಸರ್ಕಾರದ (ಕಾರ್ಯಕಲಾಪಗಳ ನಿರ್ವಹಣೆ) ನಿಯಮಗಳು, 1977 ರ 17ನೇ ನಿಯಮದ (2)ನೇ ಉಪ ನಿಯಮದ ಪರಂತುಕದ ವ್ಯಾಪ್ತಿಯೊಳಗೆ ಬರುತ್ತದೆ ಮತ್ತು ಅದರಂತೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
01/07/19

(ಬಿ.ಹರಿನಾರಾಯಣ)
ಸರ್ಕಾರದ ಅಧೀನ ಕಾರ್ಯದರ್ಶಿ (ತಾಂತ್ರಿಕ-2)
ಜಲ ಸಂಪನ್ಮೂಲ ಇಲಾಖೆ.

ಇವರಿಗೆ :-

1. ಪ್ರಧಾನ ಮಹಾಲೇಖಪಾಲರು, (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನ), ಕರ್ನಾಟಕ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಕಾವೇರಿ ನೀರಾವರಿ ನಿಗಮ, ಬೆಂಗಳೂರು.
3. ಮುಖ್ಯ ಇಂಜಿನಿಯರ್, ಹೇಮಾವತಿ ನಾಲಾ ವಲಯ, ತುಮಕೂರು.
4. ವಿಶೇಷಾಧಿಕಾರಿ ಹಾಗೂ ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ (ಲೋ.ಇ. ಆರ್ಥಿಕ ಕೋಶ), ವಿಧಾನ ಸೌಧ, ಬೆಂಗಳೂರು.
5. ಸರ್ಕಾರದ ಉಪ ಕಾರ್ಯದರ್ಶಿ (ಸಚಿವ ಸಂಪುಟ), ಕರ್ನಾಟಕ ಸರ್ಕಾರ (ಪ್ರಕರಣ ಸಂಖ್ಯೆ:ಸಿ-354/2019, ದಿನಾಂಕ:14-06-2019).
6. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.